1584(ಬ) 223
4pk
16/04/26

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಲ್ಕೀಸ್ ಬಾನು ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

---

**ಸೂಚನೆ:**

ಶಿವಮೊಗ್ಗ ನಗರದ ವಿವಿಧ ಬಡಾವಣೆಯಲ್ಲಿ ಸುಮಾರು 15 ವರ್ಷಗಳಿಂದ ಹಿಡಿದು 50 ವರ್ಷಗಳ ವರೆಗೆ ಕಂದಾಯ ಭೂಮಿ ಮಾಲೀಕರಿಂದ ನೊಂದಣಿ ಆಗದೇ ವಿವಿಧ ರೀತಿಯ ಒಪ್ಪಂದ ಪತ್ರಗಳ ಮೂಲಕ ಖರೀದಿ ಮಾಡಿಕೊಂಡು ಸಾರ್ವಜನಿಕರು ಮನೆ ನಿರ್ಮಾಣ ಮಾಡಿಕೊಂಡು ವಾಸವಿರುತ್ತಾರೆ. ಸದರಿ ವಾಸದ ಮನೆಗಳಿಗೆ ವಿದ್ಯುತ್ ಸಂಪರ್ಕ ಮತ್ತು ಕುಡಿಯುವ ನೀರಿನ ಸಂಪರ್ಕ ಹಾಗೂ ಬೀದಿ ದೀಪ ರಸ್ತೆ ಚರಂಡಿ ಇನ್ನಿತರ ಮೂಲಭೂತ ಸೌಲಭ್ಯಗಳನ್ನು ಹೊಂದಿರುತ್ತಾರೆ. ಈ ರೀತಿ ಮನೆ ನಿರ್ಮಾಣ ಮಾಡಿಕೊಂಡು ವಾಸವಿರುವ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆ ಮಾಡಲು ಹಾಗೂ ಹಕ್ಕು ಸ್ವಾಧೀನ ಪತ್ರ ನೀಡುವ ಬಗ್ಗೆ.

**ಉತ್ತರ:**

ಸರ್ಕಾರದ ಅಧಿಸೂಚನೆ ಸಂಖ್ಯೆ UDD/126/GEL/2025 ದಿನಾಂಕ 11-02-2025ರ ಆದೇಶದಂತೆ ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976ಕ್ಕೆ ತಿದ್ದುಪಡಿ ತಂದು ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯದೇ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನಾಂಕ 10-09-2024ರ ಪೂರ್ವದಲ್ಲಿ ನೋಂದಣಿ ಆಗಿರುವ ಕಂದಾಯ ನಿವೇಶನ ಮತ್ತು ಕಟ್ಟಡಗಳಿಗೆ "ಬಿ ಖಾತೆ" ಮಾಡಲು ಆದೇಶಿಸಿದ್ದು, ಅದರಂತೆ ಶಿವಮೊಗ್ಗ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 10-9-2024ರ ಪೂರ್ವದಲ್ಲಿ ನೋಂದಣಿ ಆಗಿರುವ ನಿವೇಶನ ಮತ್ತು ಕಟ್ಟಡಗಳಿಗೆ ಬಿ-ಖಾತಾ ಮಾಡಲಾಗಿರುತ್ತದೆ.

ಶಿವಮೊಗ್ಗ ನಗರದ ವಿವಿಧ ಬಡಾವಣೆಗಳಲ್ಲಿ ಕಂದಾಯ ಭೂಮಿಯ ಮಾಲೀಕರಿಂದ ಯಾವುದೇ ಕಾನೂನಾತ್ಮಕ ನೋಂದಣಿಯಾಗದೇ ಇರುವ ಸ್ವತ್ತುಗಳಿಗೆ ಬಿ-ಖಾತಾ ಮಾಡಲು ನಿಯಮಗಳಲ್ಲಿ ಅವಕಾಶ ಇಲ್ಲದೇ ಇರುವುದರಿಂದ, ಪಾಲಿಕೆ ವ್ಯಾಪ್ತಿಯಲ್ಲಿಅಂದಾಜು 5300 ನಿವೇಶನ ಮತ್ತು ಕಟ್ಟಡಗಳ ನೋಂದಣಿ ಆಗದೆ ಇರುವುದರಿಂದ, ನೊಂದಣಿಯಾಗದೇ ಕೇವಲ ಒಪ್ಪಂದದ ಕರಾರಿನ ಆಧಾರದ ಪತ್ರಗಳ ಆಧಾರದ ಮೇರೆಗೆ "ಎ ಅಥವಾ ಬಿ ಖಾತಾ" ದಾಖಲಿಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

---

**ಕಡತ ಸಂಖ್ಯೆ: ನಅಇ 17 ಶಿಮಪಾ 2026 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ
ಸಚಿವರು